ದಿನಾಂಕ 01 ನೇ ಏಪ್ರಿಲ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ವಾದಿಪರ ಶ್ರೀ ಕೆ ಪಿ ಬಿ ವಕೀಲರಿಂದಃ-

ಈ ದಾವೆಯ ವಾದಿಯು ಕೊಡವ ಜನಾಂಗಕ್ಕೆ ಸೇರಿದ್ದು, ನಾವು ಒಕ್ಕಲಿಗ ಜನಾಂಗಕ್ಕೆ ಸೇರಿದ್ದೇವೆ ಎಂದರೆ ಸರಿ. ನಮ್ಮ ಮತ್ತು ಅವರ ನಡುವೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ದಾವಾ ಸ್ವತ್ತು ಮಾಚಿಮಾಡ ಕುಟುಂಬದ ಆಸ್ತಿ ಎಂದರೆ ಸರಿ. ಸರ್ವೆ ನಂ.98ಃ2 ರಲ್ಲಿ ವಾದಿಯರು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಅದರಲ್ಲಿ 30 ಸೆಂಟ್ ಜಾಗವನ್ನು ನಮಗೆ ಕೊಟ್ಟಿದ್ದಾರೆ ಉಳಿದ ಜಾಗದಲ್ಲಿ ವಾದಿಯರು ಸ್ವಾಧೀನದಲ್ಲಿದ್ದಾರೆ ಎಂದು ಹೇಳುತ್ತಾರೆ. ನಮಗೆ ಸೇರಿದ ಆಸ್ತಿಯ ಸರ್ವೆ ನಂ. 98ಃ1 ಆಗಿದೆ. ಸರ್ವೆ ನಂ. 98ಃ1 ರ ಪೂರ್ವಕ್ಕೆ ಒತ್ತಾಗಿ ಸರ್ವೆ ನಂ. 98ಃ2 ಇದೆ ಎಂದರೆ ಸರಿ. ಸರ್ವೆ ನಂ. 98ಃ2 ರಲ್ಲಿ 30 ಸೆಂಟ್ ಜಾಗವನ್ನು ಪೂವಯ್ಯ ಮತ್ತು ಕುಶಾಲಪ್ಪರವರು ನಮಗೆ ಕೊಟ್ಟಿದ್ದಾರೆ, ಅವರು ಮಾಚಿಮಾಡ ಕುಟುಂಬದವರು ಎಂದರೆ ಸರಿ. 1982 ರಲ್ಲಿ ಸದರಿ ಜಮೀನು ಜಮ್ಮಾ ಆಸ್ತಿ ಆಗಿದ್ದ ಕಾರಣ ನೊಂದಣಿಯಾಗುತ್ತಿರಲಿಲ್ಲ. ಆದ್ದರಿಂದ ಊರಿನ ಚೇರ್ ಮನ್ ಸಮಕ್ಷಮ ನಮಗೆ ಮಾರಾಟ ಮಾಡಿರುತ್ತಾರೆ. ಆ ರೀತಿಯ 30 ಸೆಂಟ್ ಜಾಗವನ್ನು ಸರ್ವೆ ನಂ. 98ಃ2 ರಲ್ಲಿ ಮಾರಾಟ ಮಾಡದೇ ಇದ್ದರೂ ಈಗ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 98ಃ2 ರ ಉತ್ತರಕ್ಕೆ ಸರ್ವೆ ನಂ. 98ಃ4 ರ ಗದ್ದೆ ಇದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 98ಃ1 ಉತ್ತರಕ್ಕೆ ಹಾಗೂ ಸರ್ವೆ ನಂ. 98ಃ2 ರ ಉತ್ತರಕ್ಕೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಎರಡೂ ಸರ್ವೆ ನಂಬರ್ ಗಳ ಉತ್ತರಕ್ಕೆ ಸರ್ವೆ ನಂ. 94 ರಲ್ಲಿ ಜಮ್ಮಾ ಆಸ್ತಿ ಇದೆ ಎಂದರೆ ಗೊತ್ತಿಲ್ಲ. ನಿ ಡಿ 1 ರ ದಾಖಲೆಯ ಮೂಲಕವೇ ನಮಗೆ ಆಸ್ತಿ ಮಾರಾಟ ಮಾಡಿದ್ದು, ಬೇರೆ ಯಾವುದೇ ದಾಖಲೆಯಲ್ಲಿ ನಮಗೆ ಆಸ್ತಿ ಮಾರಾಟ ಮಾಡಿಲ್ಲ. ನಿ ಡಿ 1 ರ ದಾಖಲೆಯ ಪ್ರಕಾರ ಸರ್ವೆ ನಂ. 94 ರಲ್ಲಿ 30 ಸೆಂಟ್ ಜಮ್ಮಾ ಜಮೀನನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ. ನಾನು ನಿ ಡಿ 1 ರ ಪ್ರಕಾರ ಸರ್ವೆ ನಂ. 94 ರಲ್ಲಿ ಆಸ್ತಿ ಸ್ವಾಧೀನ ಹೊಂದಿದ್ದು , ಸರ್ವೆ ನಂ. 98ಃ2 ರಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಸರ್ವೆ ನಂಬರ್ ತಪ್ಪಾಗಿದೆ ನಮಗೆ ಸರ್ವೆ ನಂ. 98ಃ1 ರಲ್ಲೇ ಆಸ್ತಿ ಇದೆ ಎಂದು ಹೇಳುತ್ತಾರೆ.

ವಾದಿ ಬೋಪಣ್ಣರವರು ಸರ್ವೆ ನಂ. 98಼2 ರ ಜಮೀನಿನಿಂದ 2 ಕಿ.ಮೀ ದೂರದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. 3 ರಿಂದ 5ನೇ ಪ್ರತಿವಾದಿಗಳು ದಾವಾ ಜಮೀನಿನ ಪಕ್ಕದಲ್ಲೆ ವಾಸಿಸುತ್ತಿದ್ದಾರೆ ಎಂದರೆ ಸರಿ. ನಾನು ಮತ್ತು 3 ರಿಂದ 5ನೇ ಪ್ರತಿವಾದಿಗಳು ಒಂದೇ ಕುಟುಂಬದವರು ಎಂದರೆ ಸರಿ. ಸರ್ವೆ ನಂ. 98಼1 ಮತ್ತು ಸರ್ವೆ ನಂ. 98಼2 ರ ನಡುವೆ ಗಡಿ ಗುರುತಿಸಬೇಕೆಂದು ವಾದಿ ನಮ್ಮ ಬಳಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 98಼2 ರಲ್ಲಿ ವಾದಿಯರು ತಮ್ಮ ಜಮೀನಿಗೆ ಕಟಿಂಗ್ಸ್ ಗಿಡಗಳನ್ನು ನೆಟ್ಟು ಬೇಲಿ ಹಾಕಿಕೊಂಡಿದ್ದರು ಎಂದರೆ ಸಾಕ್ಷಿಯು ವಾದಿಯರು ಸರ್ವೆ ನಂ. 98಼2 ರಲ್ಲಿ 30 ಸೆಂಟ್ ಜಾಗವನ್ನು ಬಿಟ್ಟು ಉಳಿದ ಜಾಗಕ್ಕೆ ಅವರು ಬೇಲಿ ಹಾಕಿಕೊಂಡಿದ್ದರು ಎಂದು ಹೇಳುತ್ತಾರೆ. ದಿನಾಂಕ 07.05.2012 ರಂದು ವಾದಿಯರು ದಾವಾ ಆಸ್ತಿಯ ಪಕ್ಕದಲ್ಲಿ ಇಲ್ಲದೇ ಇರುವುದನ್ನು ನೋಡಿಕೊಂಡು 40 ಸೆಂಟ್ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ 3 ರಿಂದ 5 ರವರು 30 ಸೆಂಟ್ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ಹಾಕಿದ್ದ ಬೇಲಿಯನ್ನು ತೆರವು ಮಾಡಿ ಜಾಗ ಒತ್ತುವರಿ ಮಾಡಿಕೊಂಡು ನಾವು ಹೊಸದಾಗಿ ಬೇಲಿ ಹಾಕಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 08.05.2012 ರಂದು ವಾದಿಯರು ಬಂದು ನೋಡಿ ಪ್ರತಿವಾದಿ 3 ರಿಂದ 5 ರವರನ್ನು ಸದರಿ ಅತಿಕ್ರಮಣದ ಬಗ್ಗೆ ಪ್ರಶ್ನಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಪ್ರತಿವಾದಿ 3 ರಿಂದ 5 ರವರು ಸೇರಿ ವಾದಿಯನ್ನು ಕುರಿತು ಇದು ನಮಗೆ ಬರಬೇಕಾಗಿರುವ ಜಾಗ ನಾವು ಸದರಿ ಜಮೀನನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ಆಗ ವಾದಿಯು ಪೊನ್ನಂಪೇಟೆ ಪೊಲೀಸ್ ಠಾಣೆಗೆ ದೂರು ಕೊಟ್ಟಾಗ ನೀವು ಹದ್ದುಬಸ್ತು ಸರ್ವೆ ಮಾಡಿಕೊಳ್ಳಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಅದರಂತೆ ನಾವು ಮತ್ತು ವಾದಿಯರು ಸೇರಿ ಸರ್ವೆನಂ.98಼2 ರ ಹದ್ದುಬಸ್ತು ಸರ್ವೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಸರ್ವೆ ಮಾಡುವಾಗ ನಮಗೆ ನೊಟೀಸ್ ಕೊಟ್ಟಿದ್ದು ನಾವು ಸರ್ವೆ ಸಮಯದಲ್ಲಿ ಭಾಗಿಯಾಗಿದ್ದೆವು ಎಂದರೆ ಸರಿಯಲ್ಲ. ನಿಪಿ 10 ರ ಪ್ರಕಾರ ಹದ್ದು ಬಸ್ತು ಸರ್ವೆ ಮಾಡಿ ವರದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಜಾಗ 40 ಸೆಂಟ್ ಅನ್ನು ನಾವು ಒತ್ತುವರಿ ಮಾಡಿಕೊಂಡು ಅದನ್ನು ನಾವು ವಾದಿಯರಿಗೆ ಬಿಟ್ಟುಕೊಡಲು ಬದ್ಧರಿದ್ದೇವೆ ಎಂದರೆ ಸರಿಯಲ್ಲ. ನಾವು ಸರ್ವೆನಂ.98಼2 ರಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ 40 ಸೆಂಟ್ ಜಾಗವನ್ನು ಅತಿಕ್ರಮಣ ಮಾಡಿ ಸ್ವಾಧೀನದಲ್ಲಿದ್ದು ಅದನ್ನು ವಾದಿಯರಿಗೆ ಬಿಟ್ಟುಕೊಡಲು ಬದ್ಧರಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.